# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ , ಮೈಸೂರು.

## SC.261/2021

**P.W.-04**
**C.W.-04**

| | | |
|---|---|---|
| ಹೆಸರು | : | Shruthi R. |
| ತಂದೆಯ ಹೆಸರು | : | Ramachandraiah S. |
| ವಯಸ್ಸು | : | 30 Years |
| ಉದ್ಯೋಗ | : | Village Accountant, T.Narasipura |
| ವಾಸಸ್ಥಳ | : | T.Narasipura |

**ದಿನಾಂಕ: 09.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

ಕಳೆದ 8 ವರ್ಷಗಳಿಂದ ಟಿ.ನರಸೀಪುರದಲ್ಲಿ ಗ್ರಾಮ ಲೆಕ್ಕಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ನಿಪಿ-2 ಸ್ಥಳ ಮಹಜರಾಗಿದ್ದು, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-2(ಬಿ) ಎಂದು ಗುರುತು ಪಡಿಸಿಕೊಳ್ಳಲಾಯಿತು. ಪೊಲೀಸರು ಮಹಜರ್ ಮಾಡುವ ಕಾಲಕ್ಕೆ ಸ್ಥಳದಲ್ಲಿ ಇದ್ದೆ. ಅದೆ ಹಳ್ಳಿಯಲ್ಲಿ ಕೆಲಸ ನಿರ್ವಹಿಸುತ್ತಿದುದ್ದರಿಂದ ಅಲ್ಲಿ ಇದ್ದೆ. ಬನ್ನಳ್ಳಿ ಗ್ರಾಮದ ಎಸ್.ಸಿ. ಬೀದಿಯಲ್ಲಿ ಇದ್ದಂತಹ ಒಂದು ಮನೆಯ ಮುಂದೆ ಕೊಲೆಯಾಗಿದ್ದು, ಆ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿದರು. ಅಲ್ಲಿ ಬಿದ್ದಿದ್ದ ಬಳೆ ಚೂರುಗಳು ಮತ್ತು ದೊಣ್ಣೆಯನ್ನು ಪೊಲೀಸರು ತೆಗೆದುಕೊಂಡರು. ಮತ್ತು ನಡೆದ ನಡವಳಿಕೆಯ ಬಾಬ್ತು ಫೋಟೋಗಳನ್ನು ತೆಗೆದರು. ಈಗ ನೋಡುತ್ತಿರುವ ಫೋಟೋಗಳು ಆ ದಿನ ತೆಗೆದ ಫೋಟೋಗಳು ಆಗಿರುತ್ತವೆ. ಸದರಿ ಫೋಟೋಗಳಲ್ಲಿ ನಾನು ಇದ್ದೇನೆ. ಅವುಗಳನ್ನು ಈಗಾಗಲೇ ನಿಪಿ-3 ರಿಂದ 6 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ನ್ಯಾಯಾಲಯದ ಮುಂದಿರುವ ಬಳೆ ಚೂರುಗಳು ಮತ್ತು ದೊಣ್ಣೆಯನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಘಟನೆ ನಡೆದ ಮರುದಿನ ಈ ಮಹಜರ್ ಮಾಡಲಾಗಿತ್ತು.

**<u>SC.No.261/2021</u>**
**<u>P.W.-01</u>**
**<u>C.W.-01</u>**

**<u>ಪಾಟೀಸವಾಲುಃ- ಶ್ರೀ.ಕೆ.ಎಂ. ವಕೀಲರು ಈ ದಿನ ಆರೋಪಿಯ ಪರವಾಗಿ ವಕಲಾತ್ತನ್ನು ಸಲ್ಲಿಸಿದ್ದು ಮತ್ತು ದೋ.ಪಟ್ಟಿಯ ಪ್ರತಿಯನ್ನು ಪಡೆದಿದ್ದು, ಪಾಟೀಸವಾಲಿಗಾಗಿ ಸಮಯ ಕೋರಿರುತ್ತಾರೆ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.